

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಶ್ರೀಸಾಮಾನ್ಯರನ್ನು ಮರೆತ ಇತಿಹಾಸ

ಸಂಸ್ಕೃತ ಸಾಹಿತ್ಯದಲ್ಲಿರುವ ಸುಪ್ರಸಿದ್ಧ ನಾಟಕಗಳು ರಾಜ ಮಹಾರಾಜರುಗಳ ಜೀವನದ ಸುತ್ತಲೇ ಹೆಣೆದ ಕಾವ್ಯರಚನೆಗಳಾಗಿವೆ. ಇದರಲ್ಲಿ ಆಶ್ಚರ್ಯವೇನೂ ಇಲ್ಲ. ರಾಜಮಹಾರಾಜರ ಆಸ್ಥಾನ ರತ್ನರಾಗಿದ್ದ ಕವಿಗಳು ಸಹಜವಾಗಿ ಆಶ್ರಯದಾತರನ್ನು ಸುಪ್ರಸನ್ನಗೊಳಿಸಲು ತಮ್ಮ ಪ್ರತಿಭೆಯನ್ನು ಮೀಸಲಿರಿಸಿ ಕಾವ್ಯರಚನೆಗೆ ಪ್ರಯತ್ನಿಸಿದ್ದಾರೆ. ಜನಸಾಮಾನ್ಯರನ್ನು ಕಥಾವಸ್ತುವನ್ನಾಗಿಸಿಕೊಂಡು ರಚಿತವಾದ ನಾಟಕಗಳು ತುಂಬಾ ಅಪರೂಪ. ಅಂತಹ ಚಿತ್ರಣವೇನಿದ್ದರೂ ಅದು ತಮ್ಮ ರಾಜನನ್ನು ಚಿತ್ರಿಸಲು ಇದ್ದ ಭಿತ್ತಿ ಮಾತ್ರ! ರಾಜಮಹಾರಾಜರ ಜೀವನ ಸಾಧನೆ; ಅವರ ತ್ಯಾಗ-ಭೋಗ, ವಿಲಾಸಿ ಬದುಕು; ಯುದ್ಧ-ಬೇಟೆ ಮುಂತಾದವುಗಳೇ ಕಾವ್ಯದ ಪ್ರಧಾನ ವಸ್ತುಗಳಾಗಿವೆ. ಅಲ್ಲಿ ರಾಜಮಹಾರಾಜರ ಜೀವನಾಧಾರಿತ ವಸ್ತು ಇದೆಯೇ ಹೊರತು ಜನಸಾಮಾನ್ಯನ ಜೀವನವನ್ನು ಆಧರಿಸಿದ ವಸ್ತು ಇಲ್ಲವೆಂದು ಸಂಸ್ಕೃತ ಕವಿಗಳ ಮೇಲೆ ದೋಷಾರೋಪಣೆ ಇದೆ. ಈ ಧೋರಣೆ ಈಗಲೂ ಬದಲಾಗಿಲ್ಲ; ಅದು ಸಾಹಿತ್ಯದಲ್ಲಿಯೂ ಇದೆ, ಇತಿಹಾಸದಲ್ಲಿಯೂ ಇದೆ. ಇದಕ್ಕೊಂದು ಅಪವಾದವೆಂಬಂತೆ ಶೂದ್ರಕನ 'ಮೃಚ್ಛಕಟಿಕ' ನಾಟಕ ಮಾತ್ರ ಜನಸಾಮಾನ್ಯರ ನೋವು ನಲಿವುಗಳನ್ನು ಒಳಗೊಂಡ ಕೃತಿಯಾಗಿದೆ.

ಪ್ರಾಚೀನ ಕನ್ನಡ ಸಾಹಿತ್ಯದ ದಾರಿಯೂ ಸಹ ಇದೇ ಆಗಿದೆ. ಸಂಸ್ಕೃತ ಅಥವಾ ಕನ್ನಡ ಕವಿಗಳ ಕಾವ್ಯ ಪ್ರತಿಭೆ ಅರಮನೆಯೆಂಬ ಸೆರೆಮನೆಯಲ್ಲಿ ಬಂಧಿತವಾಗಿದೆ ಎಂದೇ ಹೇಳಬಹುದು. ಅಪರೂಪಕ್ಕೊಂಬಂತೆ ಕವಿ ಹರಿಹರ ಮಾತ್ರ ಇದಕ್ಕೆ ವಿರುದ್ಧವಾದ ನಿಲುವನ್ನು ತಾಳಿದ್ದಾನೆ.

**ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆ ಅಕ್ಕಟಾ**
**ತನತನಗೆ ಇಂದ್ರ ಚಂದ್ರ ರವಿ ಕರ್ಣ ದಧೀಚಿ ಬಲೀಂದ್ರನೆಂದು ಮೇಣ್**
**ಅನವರತಂ ಪೊಗಳ್ದು ಕೆಡಬೇಡ (ಪಂಪಾಶತಕ 80)**

ಸಾಯುವ ಮನುಜರಾದ ರಾಜಮಹಾರಾಜರುಗಳನ್ನು ಇಂದ್ರ ಚಂದ್ರರೆಂದು ಹೊಗಳಲು ಹರಿಹರನಿಗೆ ಮನಸ್ಸಿಲ್ಲ. ನಿತ್ಯಸ್ವರೂಪಿಯಾದ ಶಿವನಿಗೆ, ಅಮರತ್ವವನ್ನು ಪಡೆದ ಶಿವಶರಣರಿಗೆ ತನ್ನ 'ನಾಲಗೆಯಂ ಮಾರಿದೆಂ' ಎಂಬುದು ಅವನ ನಿಲುವು. ಅವನ ನೂರಾರು ರಗಳೆಗಳಲ್ಲಿ ಬರುವ ಕಾವ್ಯದ ನಾಯಕರು ಶಿವ ಅಥವಾ ಅವನ ಭಕ್ತರೇ ಆಗಿದ್ದಾರೆ. ಹರಿಹರನ ಈ ನಿಲುವು ವಚನಕಾರರಿಂದ ಪಡೆದ ಬಳುವಳಿ. ಬಸವಣ್ಣನವರು ಬಿಜ್ಜಳನ ಗದ್ದುಗೆಯ ಕೆಳಗೆ ಕುಳಿತು ಓಲೈಸದೆ 'ನಿಮ್ಮ ನಿಲುವಿಂಗೆ ಕುದಿಯಲಲ್ಲದೆ ಎನ್ನೊಡಲವಸರಕ್ಕೆ ಕುದಿದೆನಾದಡೆ ತಲೆದಂಡ ಕೂಡಲಸಂಗಮದೇವಾ' ಎಂದು ದೇವರನ್ನು ಆರಾಧಿಸುವುದಾಗಿ ಹೇಳುತ್ತಾರೆ. ಆನಂತರ ಬಂದ ದಾಸರು, ಸರ್ವಜ್ಞ ಇದೇ ದೃಷ್ಟಿ ಹೊಂದಿದವರಾಗಿದ್ದರು. ಅವರಾರೂ ರಾಜಮಹಾರಾಜರನ್ನು ಹೊಗಳಿದವರಲ್ಲ; ಅವರ ಹಂಗಿನಲ್ಲಿ ಇದ್ದವರಲ್ಲ.

ಯುದ್ಧದಲ್ಲಿ ರಾಜ ಗೆದ್ದನೆಂದರೆ ಅವನ ಸೈನಿಕರು ಅಂತಹ ಹೋರಾಟ ಮಾಡಿದರು ಎಂದರ್ಥ. ಸಿಪಾಯಿಗಳ ಸೋಲು-ಗೆಲುವೇ ರಾಜನ ಸೋಲು-ಗೆಲುವು. ಆದರೆ ರಾಜನನ್ನು ಛಲದಂಕಮಲ್ಲ, ಭುಜಬಲಚಕ್ರವರ್ತಿ, ಅಂಕತ್ರಿಣೇತ್ರ ಎಂದೆಲ್ಲಾ ಹೊಗಳಲಾಗುತ್ತದೆಯೇ ಹೊರತು ಜೀವದ ಹಂಗು ತೊರೆದು ಹೋರಾಡಿದ ಸೈನಿಕ ಅನಾಮಿಕನಾಗಿಯೇ ನೇಪಥ್ಯದಲ್ಲಿ ಉಳಿಯುತ್ತಾನೆ! ಇತಿಹಾಸದಲ್ಲಿ ಕಾಣಿಸಿಕೊಳ್ಳುವುದು ಜನಸಾಮಾನ್ಯರಿಗಿಂತ ರಾಜಮಹಾರಾಜರುಗಳು ಮತ್ತು ದೊಡ್ಡ ದೊಡ್ಡ ವ್ಯಕ್ತಿಗಳು. ಆದರೆ ಇತಿಹಾಸವೆಂದರೆ ಅಷ್ಟೇ ಅಲ್ಲ, ಅವರ ಹೋರಾಟಕ್ಕೆ ಬೆನ್ನೆಲುಬಾಗಿ ನಿಂತರೂ ಅಜ್ಞಾತರಾಗಿ ಉಳಿದ ಶ್ರೀಸಾಮಾನ್ಯನ ಪಾತ್ರವೂ ಪ್ರಮುಖ; ಅವನ ಬೆಂಬಲ, ಹೋರಾಟ, ಬವಣೆ, ಸ್ಪಂದನ, ತ್ಯಾಗ ಇವಾವೂ ಇತಿಹಾಸದಲ್ಲಿ highlight ಆಗುವುದಿಲ್ಲ. ಈ ಅರ್ಥದಲ್ಲಿ ಯಾವುದೇ ದೇಶದ ಇತಿಹಾಸವನ್ನು ತೆಗೆದುಕೊಂಡರೂ ಅದು ಅಪರಿಪೂರ್ಣ. ಕನ್ನಡ ನಾಡಿನ ಇತಿಹಾಸದಲ್ಲಿ ಕಿತ್ತೂರು ರಾಣಿ ಚೆನ್ನಮ್ಮನ ಪ್ರಸ್ತಾಪವಿರುವಂತೆಯೇ ಅಪರೂಪವಾಗಿಯಾದರೂ ಚಿತ್ರದುರ್ಗದ ಒನಕೆ ಓಬವ್ವನಂತಹ ಸಾಮಾನ್ಯ ಮಹಿಳೆಯ ದಾಖಲೆಯೂ ಇದೆ. ಆದರೆ ಆಕೆಯಂತೆ ಶ್ರೀಸಾಮಾನ್ಯರನೇಕರು ಆಗಿ ಹೋಗಿದ್ದರೂ ಚರಿತ್ರೆಯ ಪುಟಗಳಲ್ಲಿ ಕಾಣಿಸುವುದಿಲ್ಲ. ಇದೇ ರೀತಿ ಸ್ವಾತಂತ್ರ್ಯ ಪೂರ್ವದ ನೇತಾರರನ್ನು ಕುರಿತು ಅನೇಕ ಗ್ರಂಥಗಳು ರಚನೆಯಾಗಿವೆ. ಅವುಗಳಲ್ಲಿ ಜನಸಾಮಾನ್ಯರ ಕೊಡುಗೆ ದಾಖಲಾಗಿರುವುದು ಅತ್ಯಲ್ಪ. ನೇತಾರರು ಇತಿಹಾಸದಲ್ಲಿ ದಾಖಲೆಯಾದಂತೆ ಅವರ ಹಿಂದೆ ಇದ್ದ ಜನಸಾಮಾನ್ಯರ ನೋವು, ಸಂಕಟ, ತವಕ, ತಲ್ಲಣಗಳೇನು, ಕೊಡುಗೆ ಏನೆಂಬುದು ಸುಲಭಕ್ಕೆ ದೊರೆಯುವುದಿಲ್ಲ.

ಕಳೆದ ವಾರ ಬೆಳಗಾವಿಯ ನಾಗನೂರು ಮಠದ ಕಾರ್ಯಕ್ರಮಕ್ಕೆ ಹೋಗಿದ್ದ ಸಂದರ್ಭ. ಆಗ ಬೆಳಗಾವಿ ಸಮೀಪದ ನಾಗನೂರು ಗ್ರಾಮದಲ್ಲಿ ಸ್ವಾತಂತ್ರ್ಯಪೂರ್ವ ಕಾಲದಲ್ಲಿ ನಡೆದ ಘಟನೆಯೊಂದು ಅಲ್ಲಿಯ ಪತ್ರಿಕೆಯಲ್ಲಿ ವರದಿಯಾಗಿದ್ದನ್ನು ಓದಿ ರೋಮಾಂಚನವಾಯಿತು. 1831 ರಲ್ಲಿ ಕಿತ್ತೂರು ಚೆನ್ನಮ್ಮನ ಬಲಗೈ ಬಂಟ ಸಂಗೊಳ್ಳಿ ರಾಯಣ್ಣನನ್ನು ಬ್ರಿಟಿಷರು ಖಾನಾಪುರ ತಾಲೂಕಿನ ನಂದಗಡದಲ್ಲಿ ಗಲ್ಲಿಗೇರಿಸಿದ್ದರು; ಸರಕಾರದ ವಿರುದ್ಧ ಸೊಲ್ಲೆತ್ತುವವರಿಗೆ ಇದೇ ರೀತಿಯ ಶಾಸ್ತಿಯಾಗುವುದೆಂಬ ಸಂದೇಶವನ್ನು ದೇಶದಲ್ಲಿ ರವಾನಿಸಿದ್ದರು. ಆ ಹುತಾತ್ಮನ ಶತಮಾನೋತ್ಸವ 1931 ರ ಜನವರಿ 26 ರಂದು ನಡೆಯಲು ಏರ್ಪಾಡಾಗಿತ್ತು. ಅಂದು ಬ್ರಿಟಿಷ್ ಪ್ರಾಂತಾಧಿಕಾರಿ ವೆಲ್ಸ್ ಎಂಬಾತನು ಪೋಲೀಸು ಫೌಜಿನೊಂದಿಗೆ ಬೈಲಹೊಂಗಲ ತಾಲೂಕಿನ ನಾಗನೂರಿಗೆ ಬಂದ. ಆ ಊರಿನ ಗೌಡನ ಮನೆಯಲ್ಲಿ ಸ್ವಾತಂತ್ರ್ಯ ಯೋಧರು ಅಡಗಿಕೊಂಡಿದ್ದಾರೆಯೇ ಎಂದು ಮನೆಯನ್ನೆಲ್ಲಾ ಹುಡುಕಿದ. ಅಲ್ಲಿ ಯಾರೂ ಸಿಗಲಿಲ್ಲ.

- 2 -

ಹತಾಶೆಯಿಂದ ಹಿಂದಿರುಗುವ ಮುನ್ನ ಪಡಸಾಲೆಯ ಗೋಡೆಯನ್ನೊಮ್ಮೆ ನೋಡಿದ. ಅಲ್ಲಿ ಗಾಂಧೀಜಿಯ ಭಾವಚಿತ್ರ ವಿರಾಜಮಾನವಾಗಿತ್ತು. ಅಧಿಕಾರಿಯ ಮೈಯೆಲ್ಲಾ ಉರಿದು ಹೋಯಿತು. ಸಿಟ್ಟಿನಿಂದ ಆ ಭಾವಚಿತ್ರವನ್ನು ಕಿತ್ತು ನೆಲದ ಮೇಲೆ ಎಸೆದು ತನ್ನ ಬೂಟುಗಾಲುಗಳಲ್ಲಿ ತುಳಿದ. ಅದನ್ನು ನೋಡಿ ಮನೆಯಲ್ಲಿದ್ದ ನಾಗವ್ವನ ರಕ್ತ ಕುದಿಯಿತು. ಮೂಲೆಯಲ್ಲಿ ಬಿಟ್ಟಿದ್ದ ಹಳೆಯ ಚಪ್ಪಲಿಯನ್ನು ಕೈಗೆತ್ತಿಕೊಂಡು ಅಧಿಕಾರಿಯ ಕೊರಳಪಟ್ಟಿಯನ್ನು ಹಿಡಿದು ಕೆನ್ನೆಗೆ ಬಾರಿಸಿದಳು. 'ಮಹಾತ್ಮಾ ಗಾಂಧೀಕೀ ಜೈ, ಭಾರತ್ ಮಾತಾಕೀ ಜೈ' ಎಂದು ಕೂಗಿದಳು. ಅವಮಾನಿತನಾದ ಅಧಿಕಾರಿ ಜಾಗ ಖಾಲಿ ಮಾಡಿದ. ಮುಂದೆ ತನಿಖೆ ನಡೆದು ಆ ಅಧಿಕಾರಿಯನ್ನು ಬ್ರಿಟಿಷ್ ಸರಕಾರ ಸೇವೆಯಿಂದ ವಜಾಮಾಡಿತು. ಅಂದಿನ ಸರಕಾರ ತಳೆದ ನಿಲುವೂ ಸಹ ಮೆಚ್ಚುಗೆಗೆ ಅರ್ಹವಾದರೂ ಅದರ ಹಿಂದೆ ಜನರ ಭಾವನೆಗಳಿಗೆ ಧಕ್ಕೆ ಉಂಟುಮಾಡಿದರೆ ಆಡಳಿತ ನಿರ್ವಹಣೆ ಕಷ್ಟವಾದೀತೆಂಬ ಅರಿವಿನ ತಂತ್ರಗಾರಿಕೆ ಇದ್ದೀತು!

ಸ್ವಾತಂತ್ರ್ಯಪೂರ್ವದಲ್ಲಿ ನಡೆದ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದವರು ಇತಿಹಾಸದಲ್ಲಿ ದಾಖಲಾಗಿದ್ದಾರೆ. ಆದರೆ ನಾಗನೂರಿನ ನಾಗವ್ವನಂತಹ ಅಸಂಖ್ಯಾತರು ಅನಾಮಧೇಯರಾಗಿ ಉಳಿದಿದ್ದಾರೆ. ಅವರ ಹೋರಾಟ ಕಡಿಮೆಯದೇನೂ ಅಲ್ಲ. ಅದನ್ನು ಗುರುತಿಸುವ ಕಾರ್ಯ ಮಾತ್ರ ಆಗಿಲ್ಲ. ಜನಸಾಮಾನ್ಯರು ನೈತಿಕ ಮೌಲ್ಯ ಉಳ್ಳವರಾಗಿ ನಾಗವ್ವನಂತೆ ನೀತಿಗೆಟ್ಟವರಿಗೆ ಕಪಾಳಮೋಕ್ಷ ಮಾಡುವಂತಾದರೆ ಮಾತ್ರ ಸಮಾಜ ಮತ್ತು ದೇಶದ ಸುಧಾರಣೆ ಆದೀತು. ಇತಿಹಾಸವು ದಾಖಲಿಸದೆ ಮರೆತ ನಾಗವ್ವನಂತಹವರೇ ನಿಜವಾದ ಭಾರತೀಯ ಇತಿಹಾಸದ ನಿರ್ಮಾತೃಗಳು!

ಕಾವ್ಯ ಮೀಮಾಂಸೆಯ ಒಂದು ಪ್ರಸಿದ್ಧ ಸಾಲು ಹೀಗಿದೆ: "Unsaid is the essence of poetry!". ಎಲ್ಲವನ್ನೂ ವಾಚ್ಯವಾಗಿ ಹೇಳದೆ ಓದುಗನ ಊಹೆಗೆ ಬಿಡುವುದೇ ನಿಜವಾದ ಕವಿತೆಯ ಸೊಬಗು. ಈ ಮಾತು ಕಾವ್ಯಕ್ಕೆ ಸರಿಹೊಂದಬಹುದು. ಇದನ್ನು ಕೊಂಚ ಬದಲಾಯಿಸಿ ಇತಿಹಾಸವನ್ನು ಕುರಿತು ಹೀಗೆ ಟಿಪ್ಪಣಿ ಮಾಡಬಹುದು: "Untold is the loss to History!" (ವಾಚ್ಯವಾಗಿ ಹೇಳದೆ ಕೇವಲ ಊಹೆಗೆ ಬಿಡುವುದು ಇತಿಹಾಸಕ್ಕೆ ಉಂಟಾಗುವ ನಷ್ಟ)

**13.12.2012**

**ಶ್ರೀ ತರಳಬಾಳು ಜಗದ್ಗುರು**
**ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**

❑